

ಎಂದವನ ಮಾತು ಮುಗಿಸೋ ಮುಂಚೆಯೇ ಕೆಂಡಾಮಂಡಲವಾದ ಇವಳು, 'ಏನಪ್ಪಾ ನೀನು ಹೇಳೋದು, ನಾವೆಲ್ಲಿ ಅದನ್ನು ಆರ್ಡರ್ ಮಾಡಿದ್ವೀ...' ಎಂದು ಎಗರಾಡತೊಡಗಿದಳು.

ಅವನು ಗಾಬರಿಯಾಗಿ, 'ಸಾರಿ ಮೇಡಂ, ನಾನು ನಿಮ್ಮ ಸಾಮಾನುಗಳ ಜೊತೆ, ಅದನ್ನು ಇದರಲ್ಲೇ ತಂದಿದ್ದೆ...' ಎಂದು ತೊದಲುತ್ತಿದ್ದವನು, ಮೆಲ್ಲನೆ ಅಲ್ಲಿಂದ ಪಾರಾಗಲು ಪ್ರಯತ್ನಿಸಿದ.

'ನಮಗೆ ಅವೆಲ್ಲ ಗೊತ್ತಿಲ್ಲ, ನಮಗೆ ಅರ್ಜೆಂಟಾಗಿ ಬೇಕಾಗಿದ್ದ ವಸ್ತುಗಳನ್ನೆಲ್ಲ ಹಾಳು ಮಾಡಿಬಿಟ್ಟೆಯಲ್ಲ! ನಮಗೆ ಬೇಡ ಇವು... ವಾಪಸ್ ತೊಗೊಂಡು ಹೋಗು...' ಎಂದು ಕಮಲು ಗದರುತ್ತಲೇ ಇದ್ದಾಳೆ. ಹೆದರಿದ ಅವನು ಅಷ್ಟರಲ್ಲೇ ಯಾವ ಮಾಯದಲ್ಲಿ ಅಲ್ಲಿಂದ ಓಡಿಹೋದನೋ.

'ನಿಂತ್ಕೋಪ್ಪ... ಏಯ್ ಹುಡುಗ...' ಎಂದವಳು ಕೂಗುತ್ತಲೇ ಇದ್ದಾಳೆ, ಅವನು ಅಲ್ಲಿದ್ದರೆ ತಾನೇ?

'ರೀ' ಎಂದವಳ ಆರ್ತರಾಗ ಶುರುವಾಯ್ತು. ಶ್ರೀಕಂಠು ಮುಂದೆ ನಿಂತುಕೊಂಡು ಹೀಗೀಗೆ ಅಂತ ಅಲವತ್ತುಕೊಂಡಳು. ಅಸಹಾಯಕತೆ–ಕೋಪದಿಂದ ಅವಳಿಗೆ ಥಕ ಥೈ ಎಂದು ಕುಣಿಯುವಂತಾಗಿತ್ತು.

ಸೀದಾ ಅಡುಗೆ ಮನೆಗೆ ಹೋದವಳೇ ಟಾಪ್ ರಾಮನ್ ನೂಡಲ್ಸ್ ಪ್ಯಾಕೇಟು, ಗರಂ ಮಸಾಲ ಪ್ಯಾಕ್, ಟೊಮ್ಯಾಟೊ ಮತ್ತು ಚಿಪ್ಸ್ ಪ್ಯಾಕೇಟನ್ನು ಸಿಂಕಿನೊಳಗೆ ಹಿಡಿದು ಜೋರಾಗಿ ನಲ್ಲಿ ತಿರುಗಿಸಿದಳು. ಎಲ್ಲವನ್ನೂ ಉಜ್ಜಿ ಉಜ್ಜಿ ತೊಳೆದು, ಬಟ್ಟೆಯಲ್ಲಿ ಒರೆಸಿ, ಮೂಸಿ ನೋಡಿ ಮುಖ ಸಿಂಡರಿಸಿಕೊಂಡಳು. ಕೋಪ ಉಕ್ಕುತ್ತಿತ್ತು. ಆ್ಯಪ್ ತೆಗೆದು ಕಸ್ಟಮರ್ ಕೇರ್‌ಗೆ ಕಂಪ್ಲೇಂಟ್ ಕುಟ್ಟಿದಳು.

ನಾಲ್ಕು ಕಾರಣಗಳ ಆಯ್ಕೆ ಕಾಣಿಸಿಕೊಂಡಿತು. ಇದ್ದ ನಾಲ್ಕರಲ್ಲಿ ಮೊದಲ ಕಾರಣ ಆರಿಸಿಕೊಂಡು, 'ನಿಮ್ಮ ಪ್ರಾಡಕ್ಟ್ ಗುಣಮಟ್ಟ ಸರಿಯಾಗಿಲ್ಲ. ನಾನು ಅಸಂತೋಷಿ' ಎಂದು ಮೆಸೇಜ್ ಮಾಡಿದಳು.

ಅತ್ತ ಕಡೆಯಿಂದ 'ಏಕೆ?' ಎಂದು ಮತ್ತೆ ನಾಲ್ಕು ಆಪ್ಷನ್ ಬಂತು. 'ವಸ್ತು ಹಳೆಯದಾಗಿದೆಯೇ, ಪೊಟ್ಟಣ ಹರಿದುಹೋಗಿದೆಯೇ, ಬೇರೆ ವಸ್ತು ಸರಬರಾಜಾಗಿದೆಯೇ ಅಥವಾ ಗುಣಮಟ್ಟ ಸರಿಯಾಗಿಲ್ಲವೇ?'

ಮತ್ತೆ ಕೋಪದಿಂದ ಕುಟ್ಟಿದಳು – 'ಪದಾರ್ಥಗಳು ವಾಸನೆ ಬರುತ್ತಿವೆ'. ಅತ್ತ ಕಡೆಯಿಂದ ತಟ್ಟನೆ, 'ಅದರ ಫೋಟೊ ಹಾಕಿ' ಎನ್ನುವ ಉತ್ತರ. ಕಮ್ಲೂ ಕಕ್ಕಾಬಿಕ್ಕಿಯಾದಳು. ಹಲ್ಲು ಮುಡಿ ಕಚ್ಚಿ 'ಬರೀ ಅಂಟು ಅಂಟು...'

ಅತ್ತಲಿಂದ 'ಅದರ ಫೋಟೊ ಹಾಕಿ...'

'ವಾಸನೆ, ಅಂಟಿನ ಫೋಟೊ ಹೇಗೆ ಹಾಕೋದು? ಮೊಟ್ಟೆಯ ಲೋಳೆ ಕೈಗೆ ಮೆತ್ತುತ್ತಿದೆ... ನಾವಿದನ್ನೆಲ್ಲ ತಿನ್ನೋಲ್ಲ' ಎಂದು ಭುಸುಗುಡುತ್ತ ಟೈಪಿಸಿದಳು.

'ಅನನುಕೂಲವಾಗಿದ್ದಕ್ಕೆ ಕ್ಷಮಿಸಿ... ನಾವು ನಿಮಗೆ ಹೇಗೆ ಸಹಾಯ ಮಾಡಬಹುದು?'

ಮಾಡೋದೆಲ್ಲ ಮಾಡಿಬಿಟ್ಟು ಈಗ ವಿನಯದ ನಾಟಕ ಬೇರೆ ಎಂದು ಗೊಣಗುಟ್ಟಿಕೊಂಡು 'ನನಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿ...' ಎಂದಳು.

'ನೀವು ಹೇಳುತ್ತಿರುವುದು ಸ್ಪಷ್ಟವಾಗಿಲ್ಲ. ಪದಾರ್ಥ ಸರಿಯಾಗಿಲ್ಲವೇ... ಫೋಟೊ ಕಳಿಸಿ'.

'ಫೋಟೊ ಹೇಗೆ ಕಳಿಸೋದು? ಇದು ಅಮೂರ್ತ ವಿಷಯ...'

'ಸರಿ, ನಿಮ್ಮ ದೂರನ್ನು ದಾಖಲಿಸಿಕೊಳ್ಳಲಾಗಿದೆ... ಸಂಬಂಧಪಟ್ಟವರ ಗಮನಕ್ಕೆ ತರುತ್ತೇವೆ'.

'ತಂದು ಏನು ಸುಖ... ಈಗ ನನ್ನ ಕೆಲಸವೆಲ್ಲ ಕೆಟ್ಟುಹೋಯ್ತು... ಹೀಗಾ ವಸ್ತುಗಳನ್ನು ಸರಬರಾಜು ಮಾಡುವುದು? ನಿಮಗೆ ಜವಾಬ್ದಾರಿ ಬೇಡವೇ?'

ಮೂರು ನಿಮಿಷ ಅತ್ತಲಿಂದ ಏನೂ ಉತ್ತರವಿಲ್ಲ. ನಂತರ, 'ದಯವಿಟ್ಟು ಕ್ಷಮೆ ಇರಲಿ'.

'ನಮಗೆ ಅರ್ಜೆಂಟಿದ್ದಾಗ ಹೀಗಾ ಪ್ರಾಡಕ್ಟ್‌ಗಳನ್ನು ಸಪ್ಲೈ ಮಾಡೋದು?'

'ಕ್ಷಮಿಸಿ, ನಿಮ್ಮ ಸಮಸ್ಯೆ ಅರ್ಥವಾಗುತ್ತಿಲ್ಲ...'

'ನಿಮ್ಮ ಸಂಸ್ಥೆಗೆ ಜವಾಬ್ದಾರಿ ಇಲ್ಲವಾ? ಗ್ರಾಹಕರಿಗೆ ತೊಂದರೆ ಕೊಡುತ್ತಿದ್ದೀರಿ. ನಮಗೆ ಒಗ್ಗದ ಅಂಟು–ವಾಸನೆ ಹೇಗೆ ಹೋಗಲಾಡಿಸೋದು?'

'ಅಡಚಣೆಗೆ ಕ್ಷಮಿಸಿ...'

'ಇಷ್ಟು ಬೇಜವಾಬ್ದಾರಿ? ಹಾರಿಕೆ ಉತ್ತರ ಕೊಟ್ಟರೆ ನಿಮ್ಮ ಸಂಸ್ಥೆ ಹೆಸರು ಹಾಳಾಗುವುದು ಖಚಿತ...'

ಅತ್ತ ಕಡೆಯಿಂದ ಕೊಂಚ ಹೊತ್ತು ಮೌನ. 'ಉತ್ತರಿಸಿ, ನಾನಿಲ್ಲಿ ಕಾಯುತ್ತಿದ್ದೇನೆ...' – ಕಮ್ಲೂ ಕೆಂಡಾಮಂಡಲವಾಗಿದ್ದಳು. ಮಹಡಿ ಮೇಲಿಂದ ಮಗ 'ಅಯ್ಯೋ...' ಎಂದು ನಾಲ್ಕೈದು ಬಾರಿ ಅರಚಿಕೊಂಡಿದ್ದ.

'ಸಂಬಂಧಿತರಿಗೆ ವಿಷಯ ತಿಳಿಸಲಾಗಿದೆ' – ಮೊಬೈಲ್‌ನಲ್ಲಿ ಮೆಸೇಜ್ ಬಂತು.

'ಸಬೂಬು ಹೇಳಬೇಡಿ... ಹೀಗ್ಯಾಕಾಯ್ತು? ಜವಾಬು ಕೊಡಿ' ಎಂದವಳು ಮಗನತ್ತಣ ವರಾತವನ್ನು ತಡೆಯಲಾರದೆ ಅಸಹನೆಯಿಂದ ಬಾಣಬಿಟ್ಟಳು. ಆ ಕಡೆಯಿಂದ ಮೌನ... ಗೋಡೆ ಗಡಿಯಾರ ಒಂಬತ್ತು ಹೊಡೆಯಿತು. ಈ ಅಹಿತ ಸಂಭಾಷಣೆ ಬರೋಬರಿ ಎರಡು ಗಂಟೆಗಳು ನಡೆದಾಗ, ಈ ವ್ಯರ್ಥ ಹೋರಾಟದ ಹೈರಾಣದಿಂದ ಬಸವಳಿದ ಕಮ್ಲೂ ಎದೆಯೊಳಗೆ ಗಡಿಯಾರದ ಧ್ವನಿ ಪ್ರತಿಧ್ವನಿಸಿ, ಗಾಬರಿಯಿಂದ ಎದ್ದು ಅಡುಗೆ ಮನೆಯತ್ತ ಓಡಿದಳು.

'ಅದೇನೇ ಮೊಬೈಲ್ ಹಿಡ್ಕೊಂಡು ಅಷ್ಟೊತ್ತಿನಿಂದ ಕುಸ್ತಿ ಮಾಡ್ತಿದ್ದೀಯಾ? ಅದು ಒಡೆದುಹೋದೀತು ಹುಷಾರು' – ಎಂದು ಪತಿರಾಯ ಸಣ್ಣದನಿಯಲ್ಲಿ ಕೆಣಕಿದ್ದೇ ತಡ ಅವಳು, 'ನನ್ನ ಗ್ರಾಚಾರ... ಯಾರ ಕೈಲೂ ಒಂದು ಮಾತು ಕೇಳದೆ, ಅಚ್ಚುಕಟ್ಟಾಗಿ ತಿಂಡಿ ಮಾಡಿ ಹೊಗಳಿಸಿಕೊಳ್ಳೋಣ ಅಂತಿದ್ದೆ... ಎಲ್ಲ ಎಕ್ಕುಟ್ಟಿ ಹೋಯ್ತು ಈ ಹಾಳು ಆನ್‌ಲೈನ್ ಸಹವಾಸದಿಂದ...' ಎಂದು ಕೈಲಿದ್ದ ಮೊಬೈಲನ್ನು ಸಿಟ್ಟಿನಿಂದ ಟೇಬಲ್ ಮೇಲೆ ಕುಕ್ಕಿದಳು.

'ಅನ್ಯಾಯವಾಗಿ ಎಷ್ಟು ಟೈಮು ಹಾಳಾಗಿ ಹೋಯ್ತು...' ಎಂದವಳ ಪಶ್ಚಾತ್ತಾಪದ ಹಳಹಳಿಕೆಗೆ ಶ್ರೀಕಂಠು, 'ಜೊತೆಗೆ ನಿನ್ನ ಎನರ್ಜಿನೂ...' ಎಂದು ಸೇರಿಸಿದ.

ಅವಳ ಬಿಪಿ ನಾಗಾಲೋಟದಿಂದ ಮೇಲೇರಿ ಭುಸುಗುಡುತ್ತ ಮುಖ ಬಿಗಿದು ಕುಕ್ಕರಿಸಿದಳು.

ಮಧ್ಯರಾತ್ರಿಯೇ ಎದ್ದು ಕಂಪ್ಯೂಟರ್ ಮುಂದೆ ಕುಳಿತು ಕೆಲಸ ಮಾಡುತ್ತಿದ್ದ ಪ್ರೀತಿಯ ಮಗನನ್ನು ಉಪವಾಸ ಕೆಡವಿದ್ದಕ್ಕೆ ಕಮ್ಲೂ ಒಂದೇ ಸಮನೆ ಒದ್ದಾಡಿಕೊಳ್ಳುತ್ತಿರುವುದನ್ನು ನೋಡಲಾರದೆ, ಶ್ರೀಕಂಠು ಮೊಬೈಲ್ ತೆರೆದು ಆ ಕೂಡಲೇ 'ಸ್ವಿಗ್ಗಿ'ಯಲ್ಲಿ ತಿಂಡಿಗೆ ಆರ್ಡರ್ ಮಾಡಿದ.

ಪ್ರತಿಕ್ರಿಯಿಸಿ: **feedback@sudha.co.in**